"ಮಧುರ ಮಕ್ಕಳೇ- ಪ್ರತಿಜ್ಞೆ ಮಾಡಿ, ಎಲ್ಲಿಯತನಕ ಸತ್ಯಯುಗೀ ಸ್ವರಾಜ್ಯವು ಸ್ಥಾಪನೆಯಾಗುವುದಿಲ್ಲವೋ ಅಲ್ಲಿಯತನಕ ನಾವು ಸುಖದ ನಿದ್ರೆಯನ್ನು ಮಾಡುವುದಿಲ್ಲ, ಪವಿತ್ರರಾಗಿ ಎಲ್ಲರನ್ನು ಪವಿತ್ರರನ್ನಾಗಿ ಮಾಡುತ್ತೇವೆ"

ಪ್ರಶ್ನೆ: ನಾಟಕದಲ್ಲಿ ಯಾವ ಮೃತ್ಯುವಾಗುವುದೂ ಸಹ ಸಂಗಮಯುಗದ ಪದ್ಧತಿಯಾಗಿದೆ?

ಉತ್ತರ: ವಿಜಯಮಾಲೆಯಲ್ಲಿ ಬರುವ ಪುರುಷಾರ್ಥವನ್ನು ಮಾಡುವಂತಹ ಒಳ್ಳೊಳ್ಳೆಯ ಮಕ್ಕಳೂ ಸಹ ಆಶ್ಚರ್ಯವಾಗಿ ಕೇಳಿ, ಅನ್ಯರಿಗೂ ತಿಳಿಸಿ ಮತ್ತೆ ಓಡಿಹೋಗುತ್ತಾರೆ ಅರ್ಥಾತ್ ಸತ್ತುಹೋಗುತ್ತಾರೆ. ಇಂತಹ ಮೃತ್ಯುವೂ ಸಹ ಸಂಗಮಯುಗದ ಪದ್ಧತಿಯಾಗಿದೆ. ಶ್ರೀಮತದಂತೆ ನಡೆಯದಿದ್ದರೆ ಮಾಯೆಯು ಸೋಲಿಸಿಬಿಡುತ್ತದೆ. ತಂದೆಯ ಮಕ್ಕಳಾಗಿ ಕೈಯನ್ನು ಬಿಟ್ಟರೆಂದರೆ ಅವರು ಸತ್ತುಹೋದರು ಎಂದರ್ಥವಾಗಿದೆ. ಅವರ ಅದೃಷ್ಟಕ್ಕೆ ಬರೆ ಬೀಳುತ್ತದೆ.

ಗೀತೆ: ನಾವು ಪ್ರತಿಜ್ಞೆ ಮಾಡಿ ಈ ಧರಣಿಯ ಮೇಲೆ ಬಂದಿದ್ದೇವೆ..........

ಓಂ ಶಾಂತಿ. ಮಧುರಾತಿ ಮಧುರ ಜೀವಿಸಿದ್ದಂತೆಯೇ ಸಾಯುವಂತಹ ಮಕ್ಕಳು ಈ ಗೀತೆಯನ್ನು ಕೇಳಿದಿರಿ, ಯಾರು ಜೀವಿಸಿದ್ದಂತೆಯೇ ಬಲಿಹಾರಿಯಾಗಿದ್ದೀರಿ. ಎಲ್ಲರಂತೂ ಬಲಿಹಾರಿಯಾಗಿಲ್ಲ ನಂಬರ್ವಾರ್ ಪುರುಷಾರ್ಥದನುಸಾರ ಜೀವಿಸಿದ್ದಂತೆಯೇ ಸಾಯುತ್ತಾರೆ. ಹೇಗೆ ಯಾರನ್ನಾದರೂ ಯಾರಾದರೂ ಮಡಿಲಿಗೆ ತೆಗೆದುಕೊಳ್ಳುತ್ತಾರೆ ಅಥವಾ ದತ್ತು ಮಾಡಿಕೊಳ್ಳುತ್ತಾರೆಂದರೆ ಒಂದು ಪರಿವಾರವನ್ನು ಬಿಟ್ಟು ಇನ್ನೊಂದು ಪರಿವಾರದವರಾಗುತ್ತಾರೆ. ಹಾಗೆಯೇ ಮಕ್ಕಳಿಗೆ ಗೊತ್ತಿದೆ- ನಾವು ಆಸುರೀ ಪರಿವಾರದಿಂದ ಸತ್ತು ಈಗ ಈಶ್ವರೀಯ ಪರಿವಾರದವರಾಗಿದ್ದೇವೆ. ಈಶ್ವರನು ಬಂದು ಮಡಿಲಿಗೆ ತೆಗೆದುಕೊಂಡಿದ್ದಾರೆ. ಅಜ್ಞಾನ ಕಾಲದಲ್ಲಿ ಯಾರೂ ಸಹ ಈಶ್ವರನ ಮಡಿಲನ್ನು ತೆಗೆದುಕೊಳ್ಳುವುದಿಲ್ಲ. ಧರ್ಮಗುರುವಿನ ಮಡಿಲನ್ನು ತೆಗೆದುಕೊಳ್ಳುತ್ತಾರೆ ಹೇಗೆ ವಲ್ಲಭಾಚಾರಿ ಶ್ರೀಕೃಷ್ಣನ ಮಂದಿರದಲ್ಲಿ ಮಕ್ಕಳನ್ನು ಶ್ರೀಕೃಷ್ಣನ ಮಡಿಲಿಗೆ ಕೊಡುತ್ತಾರೆ ಆದರೆ ಅದಂತೂ ಜಡಚಿತ್ರವಾಗಿದೆ. ಆದ್ದರಿಂದ ಮತ್ತೆ ಬ್ರಾಹ್ಮಣ ಪೂಜಾರಿಗಳು ವೈಷ್ಣವರನ್ನಾಗಿ ಮಾಡಿಕೊಳ್ಳಲು ಮಡಿಲಿಗೆ ತೆಗೆದುಕೊಳ್ಳುತ್ತಾರೆ. ಈ ರೀತಿ ಅನೇಕರು ಮಾಡುತ್ತಾರೆ. ಮಕ್ಕಳಿಗೆ ಗೊತ್ತಿದೆ- ಅವಶ್ಯವಾಗಿ ಅವರ ಮಡಿಲನ್ನು ತೆಗೆದುಕೊಳ್ಳುತ್ತಾರೆ ಯಾರು ಬಂದುಹೋಗಿದ್ದಾರೆ. ಕೆಲವರು ಕ್ರೈಸ್ತನ ಮಡಿಲನ್ನು, ಇನ್ನೂ ಕೆಲವರು ಇಬ್ರಾಹಿಂನ ಮಡಿಲನ್ನು ತೆಗೆದುಕೊಳ್ಳುತ್ತಾರೆ ಆದರೆ ಅವರು ಯಾವಾಗ ಬಂದು ಹೋಗಿದ್ದಾರೆ ನಂತರ ಯಾವಾಗ ಬರುತ್ತಾರೆಂಬುದನ್ನು ಕೇವಲ ನೀವು ಮಕ್ಕಳೇ ತಿಳಿದುಕೊಂಡಿದ್ದೀರಿ. ಈಗ ನೀವು ಜೀವಿಸಿದ್ದಂತೆಯೇ ಸತ್ತಿದ್ದೀರಿ ಅಂದಾಗ ಒಬ್ಬ ತಂದೆಯ ನೆನಪಿನಲ್ಲಿರಬೇಕು. ಲೌಕಿಕತಂದೆಯ ಮಕ್ಕಳು ಮಡಿಲಿಗೆ ಬರುತ್ತಾರೆ, ತಂದೆಯು ಸತ್ತುಹೋಗುತ್ತಾರೆಂದರೆ ಮಕ್ಕಳಷ್ಟೇ ಉಳಿದುಕೊಳ್ಳುತ್ತಾರೆ ಆದರೆ ಇಲ್ಲಿ ನೀವು ಎಂತಹ ತಂದೆಯ ಮಡಿಲಲ್ಲಿ ಬಂದಿದ್ದೀರಿ ಎಂದರೆ ಈ ತಂದೆಯು ನಿಮ್ಮನ್ನು ಮೃತ್ಯುಲೋಕದಿಂದ ಅಮರಲೋಕದಲ್ಲಿ ಅಥವಾ ದುರ್ಗತಿಯಿಂದ ಸದ್ಗತಿಯಲ್ಲಿ ಕರೆದುಕೊಂಡು ಹೋಗುವವರಾಗಿದ್ದಾರೆ. ಮನುಷ್ಯಮಾತ್ರರ ಸದ್ಗತಿದಾತ ಒಬ್ಬರೇ ಆಗಿದ್ದಾರೆ. ಕೇವಲ ನಿಮಗಷ್ಟೇ ಸದ್ಗತಿ ಸಿಗುವುದಿಲ್ಲ. ಸದ್ಗತಿಯಂತೂ ಅವಶ್ಯವಾಗಿ ಎಲ್ಲರಿಗೂ ಸಿಗುತ್ತದೆ ಆದರೆ ನಾಟಕದನುಸಾರ ಕೆಲವರಿಗೆ ಸತೋಪ್ರಧಾನ, ಕೆಲವರಿಗೆ ಸತೋ, ಕೆಲವರಿಗೆ ರಜೋ, ತಮೋ ಸದ್ಗತಿ ಸಿಗುತ್ತದೆ. ಭಲೆ ತಮೋದಲ್ಲಿ ಬಂದರೂ ಸಹ ಮೊದಲು ಬಂದಾಗ ದುಃಖವಿರುವುದಿಲ್ಲ. ಮೊದಲು ಅವಶ್ಯವಾಗಿ ಸುಖವನ್ನೇ ಪಡೆಯುತ್ತಾರೆ. ಅಂತ್ಯದಲ್ಲಂತೂ ಎಲ್ಲರೂ ದುಃಖವನ್ನನುಭವಿಸುತ್ತಾರೆ.

ತಂದೆಯು ತಿಳಿಸುತ್ತಾರೆ- ಸದ್ಗತಿದಾತ, ಪತಿತ-ಪಾವನ ನಾನೊಬ್ಬನೇ ಆಗಿದ್ದೇನೆ. ಮೊಟ್ಟಮೊದಲು ಯಾವ ಆತ್ಮರು ಬರುತ್ತಾರೆ ಅವರು ಸುಖವನ್ನನುಭವಿಸುತ್ತಾರೆ. ನಂತರ ದುಃಖದಲ್ಲಿ ಬರುತ್ತಾರೆ. ನೀವು ಸಹ ನಂಬರ್ವಾರ್ ಪುರುಷಾರ್ಥದನುಸಾರ ಮೊದಲು ಸತೋಪ್ರಧಾನ, ಸತೋ, ರಜೋ, ತಮೋದಲ್ಲಿ ಬರುತ್ತೀರಿ. ನೀವೂ ಸಹ ನಂಬರ್ವಾರ್ ಸದ್ಗತಿಯನ್ನು ಪಡೆಯುತ್ತೀರಿ. ಮುಖ್ಯವಾಗಿ ಅಷ್ಟರತ್ನಗಳೆಂದು ಹೇಳುತ್ತಾರೆ. ಈಗ ನೀವೆಲ್ಲರೂ ದ್ರೌಪದಿಯರಾಗಿದ್ದೀರಿ. ತಂದೆಯ ಮಕ್ಕಳಾಗಿದ್ದೀರಿ ಅಂದಮೇಲೆ ತಂದೆಯನ್ನೆಂದೂ ಬಿಡಬಾರದು ಆದರೆ ಶ್ರೀಮತದಂತೆ ನೆನಪು ಮಾಡಲಿಲ್ಲವೆಂದರೆ ಮಾಯೆಯು ತಂದೆಯ ಕೈಯನ್ನು ಬಿಡಿಸುತ್ತದೆ. ಮಡಿಲಂತೂ ತೆಗೆದುಕೊಂಡಿರಿ, ಪ್ರಾರಂಭದಲ್ಲಿ ನಡೆಯುತ್ತಾ ಬಂದಿರಿ. ಒಳ್ಳೊಳ್ಳೆಯ ಬಹಳ ಮಧುರ ಮಕ್ಕಳೂ ಸಹ ವಿಜಯಮಾಲೆಯಲ್ಲಿ ಮೂರು-ನಾಲ್ಕನೇ ನಂಬರಿನಲ್ಲಿ ಇಡಲ್ಪಟ್ಟಿದ್ದವರೂ ಸಹ ಆಶ್ಚರ್ಯವಾಗಿ ಓಡಿಹೋಗಿಬಿಟ್ಟರು. ಇದೂ ಸಹ ಈ ಸಂಗಮಯುಗದ ರೀತಿ-ಪದ್ಧತಿಯಾಗಿದೆ. ಆಶ್ಚರ್ಯವಾಗಿ ಕೇಳುವುದು, ನಡೆಯುವುದು, ಸತ್ತು ಹೋಗುವುದು- ಇದು ಆಗುತ್ತಲೇ ಇರುತ್ತದೆ. ಆಗ ನಾಟಕದಲ್ಲಿ ಇವರ ಮೃತ್ಯುವಿತ್ತೆಂದು ತಂದೆಯು ಹೇಳುತ್ತಾರೆ. ತಂದೆಯವರಾಗಿ ನಂತರ ಕೈಬಿಟ್ಟರೆಂದರೆ ಅವರು ಸತ್ತು ಹೋದರು ಎಂದಾಗಿದೆ. ಭಲೆ ಇರುವುದಂತೂ ಈ ಪ್ರಪಂಚದಲ್ಲಿಯೇ ಆದರೆ ಜೀವಿಸಿದ್ದಂತೆಯೇ ಇಲ್ಲಿಂದ ಹೊರಟು ಆಸುರೀ ಪ್ರಪಂಚಕ್ಕೆ ಹೊರಟುಹೋದರು. ಕೆಲವು ಕಾರಣಗಳಂತೂ ಇರುತ್ತವೆಯಲ್ಲವೆ. ಆಗ ಇದು ಡ್ರಾಮಾ ಎಂದು ಹೇಳಲಾಗುತ್ತದೆ ಆದರೆ

ಶ್ರೀಮತದಂತೆ ನಡೆಯದಿದ್ದರೆ ಮಾಯೆಯಿಂದ ಸೋಲನ್ನನುಭವಿಸುತ್ತಾರೆ. ಅದೃಷ್ಟಕ್ಕೆ ಅಡ್ಡಗೆರೆ ಬೀಳುತ್ತದೆ. ಈಶ್ವರನ ಮಕ್ಕಳಾಗುವುದರಿಂದ ಮಾಯೆಯೊಂದಿಗೆ ಯುದ್ಧವಾಗುತ್ತದೆ. ಬಾಕಿ ದೇವತೆಗಳು ಮತ್ತು ಆಸುರರ ಯುದ್ಧವಾಗುವುದಿಲ್ಲ. ಮಾಯೆಯು ಅಸುರ ಆಗಿರುವ ಕಾರಣ ಜಯವನ್ನು ಪಡೆದುಕೊಳ್ಳುತ್ತದೆ.

ಒಳ್ಳೆಯದು- ಈಗ ಮಕ್ಕಳು ಬರೆಯುತ್ತಾರೆ- ರಕ್ಷಾಬಂಧನದ ಹಬ್ಬದಲ್ಲಿ ಏನು ಮಾಡುವುದು? ಪ್ರತಿಯೊಂದು ಹಬ್ಬದಲ್ಲಿ ತಯಾರಿಗಳಂತೂ ಮಾಡುತ್ತಾರಲ್ಲವೆ. ರಕ್ಷಾಬಂಧನ ಹಬ್ಬದ ಪ್ರಯುಕ್ತ ಮುಂಚೆಯೇ ಹೋಗಿ ರಕ್ಷಾಬಂಧನವನ್ನು ಕಟ್ಟುತ್ತಾರೆ. ಇದರ ಪೂರ್ಣ ರಹಸ್ಯವೂ ಸಹ ಬುದ್ಧಿಯಲ್ಲಿರಬೇಕು. ಮೊದಲಂತೂ ಬ್ರಾಹ್ಮಣ-ಬ್ರಾಹ್ಮಣಿಯರು ರಕ್ಷಾಬಂಧನವನ್ನು ಕಟ್ಟುತ್ತಿದ್ದರು. ಈಗ ಈ ಪದ್ಧತಿಯು ಬಂದಿದೆ- ಸಹೋದರಿ ಸಹೋದರನಿಗೆ ಶ್ರೀರಕ್ಷೆಯನ್ನು ಕಟ್ಟುತ್ತಾಳೆ. ಮೂಲತಃ ಬ್ರಾಹ್ಮಣರು ಶ್ರೀರಕ್ಷೆಯನ್ನು ಕಟ್ಟುತ್ತಿದ್ದರು ಏಕೆಂದರೆ ಬ್ರಾಹ್ಮಣ ಜಾತಿಯು ಶ್ರೇಷ್ಠ ಮತ್ತು ಸ್ವಚ್ಛವೆಂದು ಗಾಯನವಿದೆ. ಬ್ರಾಹ್ಮಣರು ಮೂಲತಃ ಸನ್ಯಾಸಿಗಳಿಗಿಂತಲೂ ಶ್ರೇಷ್ಠರಾಗಿದ್ದಾರೆ ಆದರೆ ಡ್ರಾಮಾನುಸಾರ ಈ ಸಮಯದಲ್ಲಿ ಸನ್ಯಾಸಿಗಳು ಶ್ರೇಷ್ಠರಾಗಿಬಿಟ್ಟಿದ್ದಾರೆ. ಮೊದಲು ಬ್ರಾಹ್ಮಣರು ಶ್ರೀರಕ್ಷೆಯನ್ನು ಕಟ್ಟುತ್ತಿದ್ದರು ನಂತರ ಜನ್ಮಾಷ್ಟಮಿಯಂದು ಅವರು ಆ ಶ್ರೀರಕ್ಷೆಯನ್ನು ತೆಗೆಯುತ್ತಾರೆ. ಹೇಗೆ ದ್ರೌಪದಿ ತನ್ನ ಜಡೆಯನ್ನು ಬಿಚ್ಚಿದ್ದಳು ಎಂದು ಹೇಳುತ್ತಾರೆ. ಋಷಿಗಳ ಜಟೆಯೂ ಸಹ ಯಾವಾಗಲೂ ಬಿಚ್ಚಿರುತ್ತದೆ. ಪವಿತ್ರತಾ ಸ್ತ್ರೀ ಇರುತ್ತಾಳೆಂದರೆ ಜುಟ್ಟನ್ನು ಕಟ್ಟಿರುತ್ತಾಳೆ. ದ್ರೌಪದಿಯು ಬಿಚ್ಚಿದ್ದಳು- ಎಲ್ಲಿಯತನಕ ನಾವು ನಮ್ಮ ರಾಜ್ಯವನ್ನು ಪಡೆಯುವುದಿಲ್ಲವೊ ಅಲ್ಲಿಯವರೆಗೂ ನಾನು ಜಡೆ ಕಟ್ಟುವುದಿಲ್ಲ. ಈಗ ನೀವು ಮಕ್ಕಳಿಗೆ ಕೇವಲ ಅರ್ಥವನ್ನು ತಿಳಿಸಲಾಗುತ್ತದೆ- ಎಲ್ಲಿಯವರೆಗೆ ನಾವು ಸ್ವರಾಜ್ಯವನ್ನು ಪಡೆಯುವುದಿಲ್ಲವೋ ಅಲ್ಲಿಯವರೆಗೆ ಸುಖದ ನಿದ್ರೆಯನ್ನು ಮಾಡುವುದಿಲ್ಲ. ಆರಾಮವು ಹರಾಮ್ (ಕೆಟ್ಟದ್ದು) ಆಗಿದೆ ಎಂದು ಹೇಳುತ್ತಾರಲ್ಲವೆ. ಒಳಗೆ ಇದೇ ಆವೇಶ(ಉತ್ಸಾಹ)ವಿರುತ್ತದೆ- ಎಲ್ಲಿಯತನಕ ಸ್ವರಾಜ್ಯವನ್ನು ಪಡೆಯುವುದಿಲ್ಲವೋ ಅಲ್ಲಿಯತನಕ ಸುಖವೆಲ್ಲಿ? ಸುಖವಂತೂ ಭವಿಷ್ಯದಲ್ಲಿ ಪಡೆಯಬೇಕಾಗಿದೆ. ಇದಕ್ಕಾಗಿ ಪುರುಷಾರ್ಥವನ್ನು ಈಗ ಮಾಡಬೇಕಾಗಿದೆ. ಈಗ ನಿಮಗೆ ಗೊತ್ತಿದೆ- ರಕ್ಷಾಬಂಧನ ಅರ್ಥಾತ್ ನಾವು ಪವಿತ್ರರಾಗಿರುವುದಕ್ಕೆ ಪ್ರತಿಜ್ಞೆ ಮಾಡುತ್ತೇವೆ. ರಕ್ಷಾಬಂಧನವೆಂದರೆ ಪ್ರತಿಜ್ಞೆಯ ಮಾತಾಗಿದೆ. ಈ ಹಬ್ಬವು ಯಾವಾಗಿನಿಂದ ಪ್ರಾರಂಭವಾಯಿತು? ಏಕೆ ಪ್ರಾರಂಭವಾಯಿತು? ರಕ್ಷಾಬಂಧನದ ಸಲಹೆಯನ್ನು ಕೊಟ್ಟವರು ಯಾರು? ಯಾರಾದರೂ ಒಬ್ಬರು ಆದೇಶ ಹೊರಡಿಸುತ್ತಾರೆ. ನಂತರ ಅವರ ಹೆಸರು ಪ್ರಸಿದ್ಧವಾಗಿಬಿಡುತ್ತದೆ. ಅಂದಾಗ ಇದು ಪವಿತ್ರತೆಯ ಸಂಕೇತವಾಗಿದೆ. ಸಹೋದರಿಯಂತೂ ಕುಮಾರಿಯಾದಳು, ಕುಮಾರಿಯರು ಶ್ರೀರಕ್ಷೆಯನ್ನು ಕಟ್ಟುತ್ತಾರೆ. ನೀವು ಗೃಹಸ್ಥಿಗಳಿಗೂ ಸಹ ಹೋಗಿ ಶ್ರೀರಕ್ಷೆಯನ್ನು ಕಟ್ಟಬೇಕಾಗಿದೆ. ಕುಮಾರರಂತೂ ಕುಮಾರರೇ ಆಗಿದ್ದಾರೆ. ಸಹೋದರಿಯು ಸಹೋದರನಿಗೆ ಕಟ್ಟುತ್ತಾಳೆ, ಕುಮಾರನಾಗಿರಬಹುದು ಅಥವಾ ಮದುವೆ ಮಾಡಿಕೊಂಡಿರಬಹುದು. ಮದುವೆ ಮಾಡಿಕೊಂಡಮೇಲೂ ಪವಿತ್ರರಾಗಿರುವುದು ಬಹಳ ಪರಿಶ್ರಮವಿದೆ. ಭಗವಂತನು ತಿಳಿಸುತ್ತಾರೆ ಈ ಅಂತಿಮದ ಒಂದು ಜನ್ಮದಲ್ಲಿ ಪವಿತ್ರರಾಗಿ ಎಂದರೂ ಸಹ ಪವಿತ್ರರಾಗುವುದಿಲ್ಲ ಆದ್ದರಿಂದ ಸಹೋದರಿಯ ಮುಖಾಂತರ ಕುಮಾರನಾಗಿರುವ ಸಹೋದರನಿಗೆ ಶ್ರೀರಕ್ಷೆಯನ್ನು ಕಟ್ಟಬೇಕು ಮತ್ತು ನಾವು ಎಂದೂ ಸಹ ವಿಷವನ್ನು ಕುಡಿಯುವುದಿಲ್ಲವೆಂದು ಪ್ರತಿಜ್ಞೆ ಮಾಡಿಸಬೇಕು. ಯಾರು ವಿಕಾರಿಗಳಾಗಿರುತ್ತಾರೆಯೋ ಅವರಂತೂ ಎಂದೂ ವಿಕಾರವನ್ನು ಬಿಡುವುದಿಲ್ಲ. ಭಗವಂತನ ಆಜ್ಞೆಯನ್ನೂ ಸಹ ಪಾಲಿಸುವುದಿಲ್ಲ ಆದ್ದರಿಂದ ಈ ಕುಮಾರ-ಕುಮಾರಿಯರ ಪದ್ಧತಿಯು ನಡೆದುಬರುತ್ತದೆ. ಈಗ ನೀವು ತಿಳಿದುಕೊಂಡಿದ್ದೀರಿ- ಹಬ್ಬವೂ ಸಹ ಈ ಸಂಗಮಯುಗದ್ದಾಗಿದೆ. ಸತ್ಯಯುಗದಲ್ಲಂತೂ ಎಲ್ಲರೂ ಅವಶ್ಯವಾಗಿ ಪವಿತ್ರರೇ ಆಗಿರುತ್ತಾರೆ. ಅಲ್ಲಿ ಶ್ರೀರಕ್ಷೆಯನ್ನು ಕಟ್ಟುವ ಅವಶ್ಯಕತೆಯೇ ಇರುವುದಿಲ್ಲ. ಇದು ಸತ್ಯಯುಗದಿಂದ ಹಿಡಿದು ಈ ಪದ್ಧತಿಯು ನಡೆದುಬಂದಿದೆ ಎಂದಲ್ಲ. ಎಲ್ಲಾ ಉತ್ಸವಗಳು ಸಂಗಮಯುಗದ್ದಾಗಿದೆ. ಲಕ್ಷ್ಮೀ-ನಾರಾಯಣರ ಉತ್ಸವವನ್ನೂ ಸಹ ಈಗಲೇ ಆಚರಿಸುತ್ತಾರೆ ಆದರೆ ಅದರ ಮಹತ್ವವಿಲ್ಲ. ಕೃಷ್ಣ ಜಯಂತಿಯನ್ನು ಆಚರಿಸುತ್ತಾರೆ ಆದರೆ ಮೊದಲು ಕೃಷ್ಣನನ್ನು ಈ ರೀತಿ ಮಾಡಿದವರು ಯಾರು ಎಂದು ಹೇಳಿ? ಮನುಷ್ಯರಿಗೆ ಗೊತ್ತಿಲ್ಲ. ಇದೂ ಸಹ ಸ್ಪಷ್ಟವಾಗಿ ಬರೆಯಬೇಕು, ಉತ್ಸವಗಳೆಲ್ಲವೂ ಈ ಸಮಯದ್ದಾಗಿದೆ. ಸತ್ಯಯುಗದಲ್ಲಿ ಇಂತಹ ಮಾತಿರುವುದಿಲ್ಲ. ಉತ್ಸವವನ್ನೂ ಸಹ ಇಲ್ಲಿ ಹೇಗೆ ಆಚರಿಸುತ್ತೇವೆಯೋ ಹಾಗೆಯೇ ಸತ್ಯಯುಗದಲ್ಲಿ ಆಚರಿಸುವುದಿಲ್ಲ, ಇಲ್ಲಿ ಆಚರಿಸುವ ಅರ್ಥವೇ ಬೇರೆಯಾಗಿದೆ. ಉತ್ಸವದ ಮಹತ್ವವು ಯಾವಾಗಿನದಾಗಿದೆ ಎಂಬುದು ತಿಳಿದುಕೊಳ್ಳುವ ಮಾತಾಗಿದೆ. ಮಕ್ಕಳಿಗೆ ತಿಳಿಸಲಾಗುತ್ತದೆ- ಈ ಉತ್ಸವಗಳು ಈ ಸಮಯದ್ದಾಗಿದೆ. ಯಾವಾಗ ಶಿವಜಯಂತಿಯ ನಂತರ ರಕ್ಷಾಬಂಧನವಾಗುತ್ತದೆ. ಪವಿತ್ರರಾಗುವ ಪ್ರತಿಜ್ಞೆ ಮಾಡುತ್ತೀರಿ- ಈ ಅಂತಿಮ ಜನ್ಮದಲ್ಲಿ ಭಾರತವನ್ನು ಅಥವಾ ವಿಶ್ವವನ್ನು ಪವಿತ್ರವನ್ನಾಗಿ ಮಾಡುವುದಕ್ಕೋಸ್ಕರ ನಾವು ಪವಿತ್ರರಾಗುತ್ತೇವೆ. ನೀವು ಮಕ್ಕಳಿಗೋಸ್ಕರ ಈ ರಕ್ಷಾಬಂಧನದ್ದು ಬಹಳ ಮಹತ್ವಿಕೆಯಿದೆ. ಪ್ರತಿಜ್ಞೆಯನ್ನು ಮಾಡಲಾಗುತ್ತದೆ ನಾವು ಎಂದೂ ಪತಿತರಾಗುವುದಿಲ್ಲ. ಈಗ ನೀವು ಪಾವನರಾಗುತ್ತೀರಿ ಆದ್ದರಿಂದ ಕೇವಲ ನೀವು ಪಾವನ ಕುಮಾರಿಯರಿಗಷ್ಟೇ ಶ್ರೀರಕ್ಷೆಯನ್ನು ಕಟ್ಟುವ ಹಕ್ಕಿದೆ. ಸಹೋದರರಿಗೆ ಸದಾ ಪವಿತ್ರರಾಗುವುದಕ್ಕೋಸ್ಕರ ಶ್ರೀರಕ್ಷೆಯನ್ನು ಕಟ್ಟಬೇಕು ಮತ್ತು ಈ ಗೃಹಸ್ಥಿಗಳಿಂದ ಪವಿತ್ರರಾಗುವ ಪ್ರತಿಜ್ಞೆಯನ್ನು ಮಾಡಿಸಬೇಕಾಗಿದೆ. ಪತಿತ-ಪಾವನ ಬನ್ನಿ ಎಂದು ಹೇಳುತ್ತಾರೆ ಆದ್ದರಿಂದ ಯಾವ ಗಾಯನವಿದೆಯೋ ಅದೇ ಪ್ರತಿಜ್ಞೆಯನ್ನು ಮಾಡಿಸುತ್ತಾರೆ- ಪತಿತರಿಂದ ಪಾವನರಾಗಿ. ತಂದೆಯು ಬಂದು ಪ್ರತಿಜ್ಞೆ ಮಾಡಿಸುತ್ತಾರೆ. ಶಿವಜಯಂತಿಯ ನಂತರ ರಕ್ಷಾಬಂಧನ ಹಬ್ಬ. ಹೋಳಿಯೂ ಸಹ ಜ್ಞಾನದ್ದಾಗಿದೆ. ದುರಿಯಾ ಮತ್ತು ಹೋಳಿ ಇವೆರಡೂ ಈ ಸಮಯದ್ದಾಗಿದೆ. ಹೋಳಿ ಅರ್ಥಾತ್ ಪವಿತ್ರರಾಗಿ, ದುರಿಯಾ ಎಂದರೆ ಜ್ಞಾನಧಾರಣೆ ಮಾಡಿ. ಅವರು ಮತ್ತೆ ಕಲ್ಲು, ಮುಳ್ಳು, ಗೊಬ್ಬರ ಮುಂತಾದುವುಗಳನ್ನು ಮಾಡಿ

ಏನೇನು ಮಾಡುತ್ತಾರೆ! ಆದ್ದರಿಂದ ಪತಿತ-ಪಾವನ ತಂದೆಯೇ ಬಂದು ಮಕ್ಕಳಿಗೆ ತಿಳಿಸುತ್ತಾರೆ.

ಯಾರು ಜೀವಿಸಿದ್ದಂತಯೇ ಸಾಯುತ್ತಾರೆಯೋ ಅವರಲ್ಲಿಯೂ ಸ್ವಂತಮಕ್ಕಳು ಮತ್ತು ಮಲತಾಯಿ ಮಕ್ಕಳಿರುತ್ತಾರೆ. ಸ್ವಂತಮಕ್ಕಳ ಲೆಕ್ಕವು ಅವಶ್ಯವಾಗಿ ತಂದೆಯ ಬಳಿ ಬರುತ್ತದೆ. ತಂದೆಯು ಅವಶ್ಯವಾಗಿ ಮಕ್ಕಳ ಎಲ್ಲಾ ವ್ಯಾಪಾರ, ವ್ಯವಹಾರ ಮತ್ತು ಸಂಪತ್ತು ಇತ್ಯಾದಿಗಳನ್ನು ತಿಳಿದುಕೊಂಡಿರುತ್ತಾರೆ. ಯಾರಿಗೆ ತಂದೆಯ ಜೊತೆ ಪೂರ್ಣ ಪ್ರೀತಿಯಿರುತ್ತದೆಯೋ ಅವರೇ ಸ್ವಂತ ಮಕ್ಕಳು, ಸ್ವಂತ ಮಕ್ಕಳಲ್ಲಿಯೂ ನಂಬರ್ವಾರ್ ಇರುತ್ತಾರೆ. ಮಲತಾಯಿ ಮಕ್ಕಳಲ್ಲಿಯೂ ನಂಬರ್ವಾರ್ ಇರುತ್ತಾರೆ. ಕೆಲವರು ಕುಪುತ್ರರು, ಕೆಲವರು ಸುಪುತ್ರರೂ ಇರುತ್ತಾರೆ. ಶಿವಜಯಂತಿಯೂ ಸಹ ಸಂಗಮದಲ್ಲಿಯೇ ಆಗುತ್ತದೆ. ಸಂಗಮಯುಗಕ್ಕೂ ಸಮಯ ಕೊಡಬೇಕು. ಹೇಗೆ ಅಧಿಕ ಮಾಸವೆಂದು ಹೇಳುತ್ತಾರೆ ನಂತರ 100 ವರ್ಷದ ಅಧಿಕ ಶತಮಾನವಾಗುತ್ತದೆ. ಇದು ಈ ಅಧಿಕ ಶತಮಾನವು ತುಂಬಾ ಶ್ರೇಷ್ಠವಾಗಿದೆ. 20ನೇ ಶತಮಾನವೆಂದು ಹೇಳುತ್ತಾರಲ್ಲವೆ ಇದರಲ್ಲಿಯೂ ಈ ಶತಮಾನದಲ್ಲಿ ತಂದೆಯು ಬರುತ್ತಾರೆ ಅದಕ್ಕೆ ಇದನ್ನು ಸಂಗಮದ ಶತಮಾನವೆಂದು ಹೇಳುತ್ತಾರೆ. ಅಲ್ಲೋಲ-ಕಲ್ಲೋಲವಾಗುವ ಸಮಯವು ಬರುತ್ತದೆ. ದೀಪಮಾಲೆಯೂ ಸಹ ಇಲ್ಲಿಯದೇ ಆಗಿದೆ. ನೀವು ಮಕ್ಕಳಿಗೆ ಗೊತ್ತಿದೆ- ಶಿವಜಯಂತಿಯ ನಂತರ ಪವಿತ್ರತೆಯ ಮಾತಾಗಿದೆ. ಪ್ರಾರಂಭದಿಂದಲೂ ಪವಿತ್ರತೆಯ ಮೇಲೆ ಜಗಳ ನಡೆಯುತ್ತಲೇ ಬಂದಿದೆ. ಪವಿತ್ರತೆಯ ಜೊತೆಗೆ ಜ್ಞಾನ ಮತ್ತು ಯೋಗದ ಹೋಳಿ, ದುರಿಯಾ ಜೊತೆಜೊತೆಯಲ್ಲಿದೆ. ತಂದೆಯ ನೆನಪೂ ಸಹ ಒಳ್ಳೆಯ ರೀತಿಯಿರಬೇಕು. ಜ್ಞಾನದ ಧಾರಣೆಯೂ(ದುರಿಯಾ) ನಡೆಯುತ್ತಿರುತ್ತದೆ. ಜ್ಞಾನದ ಮಳೆಯು ನಿಮ್ಮಮೇಲೆ ಆಗುತ್ತಲೇ ಇರುವುದು. ಪವಿತ್ರತೆಯ ಮೇಲೆಯೇ ಜಗಳಗಳೂ ನಡೆಯುತ್ತಿರುತ್ತವೆ. ಮನೆ ಗೃಹಸ್ಥದಲ್ಲಿರುತ್ತಾ ಪವಿತ್ರರಾಗಿದ್ದು ತೋರಿಸಿ ಎಂದು ನಿಮಗೆ ಬಂದು ಹೇಳುತ್ತಿರುವವರು ಯಾರೆಂದು ಮನುಷ್ಯರೆಲ್ಲರೂ ಕೇಳುತ್ತಾರೆ. ಸನ್ಯಾಸಿಗಳಂತೂ ಮನೆ-ಮಠವನ್ನು ಬಿಟ್ಟುಹೋಗುತ್ತಾರೆ. ಗೋಪಿಚಂದರಾಜನ ಕಥೆಯೂ ಇದೆ. ನೀವು ರಾಜ್ಯಭಾಗ್ಯವನ್ನು ಏಕೆ ಬಿಟ್ಟಿರೆಂದು ಅವರನ್ನು ಕೇಳಿದಾಗ ಅವರು ತಿಳಿಸಿದರು- ಪ್ರಭು ಮಿಲನಕ್ಕಾಗಿ ಬಿಟ್ಟಿದ್ದೇನೆ ಎಂದರು. ಇದರ ಮೇಲೆ ಒಳ್ಳೊಳ್ಳೆಯ ಗೀತೆಗಳನ್ನು ಹಾಡುತ್ತಾರೆ. ಇಲ್ಲಂತೂ ಗೃಹಸ್ಥ ವ್ಯವಹಾರದಲ್ಲಿದ್ದು ಪವಿತ್ರರಾಗಿರಬೇಕಾಗಿದೆ. ಪವಿತ್ರತೆಯ ಮೇಲೆಯೇ ಎಲ್ಲಾ ಏರುಪೇರುಗಳಾಗುತ್ತವೆ.

ಈ ರಕ್ಷಾಬಂಧನವು ಪವಿತ್ರರಾಗುವ ಮತ್ತು ಅನ್ಯರನ್ನು ಮಾಡುವ ನೆನಪಾರ್ಥ ಹಬ್ಬವಾಗಿದೆ. ಇಲ್ಲಿ ನೋಡಿ, ಚಿಕ್ಕ-ಚಿಕ್ಕಮಕ್ಕಳಿಗೂ ಸಾಕ್ಷಾತ್ಕಾರವಾಗುತ್ತದೆ. ಚಿಕ್ಕಮಕ್ಕಳು ಯಾವ ಭಕ್ತಿ ಮಾಡಿದರು? ತಂದೆಯು ಎಲ್ಲರಿಗೆ ತಕ್ಷಣ ಸಾಕ್ಷಾತ್ಕಾರ ಮಾಡಿಸಿದರು ಆಗ ಇದು ಚಮತ್ಕಾರವಾಗಿದೆ ಎಂದು ತಿಳಿಯುತ್ತಿದ್ದರು. ಇದಕ್ಕೆ ಶಿವತಂದೆಯ ಚರಿತ್ರೆಯೆಂದು ಹೇಳಲಾಗುತ್ತದೆ. ಕುಳಿತು-ಕುಳಿತಿದ್ದಂತೆಯೇ ಅದೃಶ್ಯವಾಗಿಬಿಡುತ್ತಿದ್ದರು ಇದನ್ನೂ ಸಹ ನಾಟಕವೆಂದೇ ಹೇಳುತ್ತಾರೆ. ಒಬ್ಬರು ಇನ್ನೊಬ್ಬರನ್ನು ನೋಡಿದರು ಮತ್ತು ಧ್ಯಾನದಲ್ಲಿ ಹೋಗಿಬಿಡುತ್ತಿದ್ದರು. ಇದೆಲ್ಲವೂ ಪರಮಪಿತ ಪರಮಾತ್ಮನ ಚರಿತ್ರೆಯಾಗಿದೆ, ಕೃಷ್ಣನದಲ್ಲ. ಕೃಷ್ಣನ ಹೆಸರನ್ನು ತೆಗೆದುಕೊಂಡು ಎಲ್ಲವನ್ನು ಕೆಡಿಸಿಬಿಟ್ಟಿದ್ದಾರೆ. ಭಾಗವತದಲ್ಲಂತೂ ಏನೇನೋ ಬರೆದುಬಿಟ್ಟಿದ್ದಾರೆ! ಸತ್ಯಯುಗದ ರಾಜಕುಮಾರನಾದ ಶ್ರೀಕೃಷ್ಣ ಸೀರೆಯನ್ನು ಕದ್ದ, ಬೆಣ್ಣೆಯನ್ನು ಕದ್ದ, ಇದನ್ನು ಮಾಡಿದ. ಇಂತಹ ಚರಿತ್ರೆಯಂತೂ ಗಾಯನ ಮÁಡಲ್ಪಡುವುದಿಲ್ಲ. ಪ್ರಪಂಚದವರು ಇದೆಲ್ಲವನ್ನೂ ಅವಶ್ಯವಾಗಿ ಶ್ರೀಕೃಷ್ಣನು ಮಾಡಿರಬಹುದು ಎಂದು ತಿಳಿಯುತ್ತಾರೆ. ಕೃಷ್ಣನ ಶರೀರದಲ್ಲಿ ಆತ್ಮವು ಬಂದಿರಬಹುದು ಅವರು ಈ ಜ್ಞಾನವನ್ನು ತಿಳಿಸಿರಬಹುದೆಂದು ಮನುಷ್ಯರು ಹೇಳುತ್ತಾರೆ ಆದರೆ ಈ ರೀತಿಯಾಗಲು ಸಾಧ್ಯವಿಲ್ಲ. ಕೃಷ್ಣನಂತೂ ರಾಜಕುಮಾರ ಹೆಸರುವಾಸಿಯಾಗಿದ್ದನು ನಂತರ ಕೃಷ್ಣನಿಗೆ ರಥವನ್ನು ತೋರಿಸುತ್ತಾರೆ ಅಂದರೆ ರಥದಲ್ಲಿ ಕೃಷ್ಣನನ್ನು ತೋರಿಸುತ್ತಾರೆ. ಕುದುರೆಗಾಡಿಯಲ್ಲಿ ಕುಳಿತು ಪಾಠವನ್ನು ಹೇಳಿಕೊಡಲಾಗುತ್ತದೆಯೇ? ಇದು ರಾಜಯೋಗದ ಪಾಠಶಾಲೆಯಾಗಿದೆ. ಎಲ್ಲಿ ಅವರು ಯುದ್ಧದ ಮೈದಾನವನ್ನು ತೋರಿಸಿದ್ದಾರೆ ಮತ್ತು ಈ ನಿಮ್ಮ ಯುದ್ಧವೆಲ್ಲಿ! ಇದು ಮಾ0iÉುಯ ಮೇಲೆ ಯುದ್ಧವಾಗಿದೆ. ರಕ್ಷಾಬಂಧನವೆಂದರೆ ಪತಿತರನ್ನು ಪಾವನ ಮಾಡಲು ಸ್ವಯಂ ಪರಮಪಿತ ಪರಮಾತ್ಮನು ಬಂದಿದ್ದಾರೆ. ನೀವು ಬ್ರಹ್ಮಾಕುಮಾರಿಯರಾಗಿದ್ದೀರಿ. ನೀವೇ ಗಾಯನ ಮಾಡಲ್ಪಟ್ಟಿದ್ದೀರಿ. ಯಾರು 21 ಕುಲದ ಉದ್ಧಾರ ಮಾಡುತ್ತಾರೆ ಅವರೇ ಕುಮಾರಿಯಾಗಿದ್ದಾರೆ. ಸಂಗಮದ ಮಾತಾಗಿದೆ ನಂತರ ಸತಯ್ಯುಗದ ಆದಿಯಲ್ಲಿ ಯಾವುದೇ ಉತ್ಸವವಿರಲಿಲ್ಲ. ರಕ್ಷಾಬಂಧನದ ನಂತರ ಕೃಷ್ಣಜಯಂತಿಯಾಗುತ್ತದೆ. ಏಕೆಂದರೆ ಸತ್ಯಯುಗದಲ್ಲಿ ಮೊದಲ ನಂಬರಿನ ಜನ್ಮದಲ್ಲಿ ಶ್ರೀಕೃಷ್ಣನದಾಗಿದೆ. ಅವರದೂ ಸಹ ರಾಜಧಾನಿಯಿರುತ್ತದೆ. ಆ ಶ್ರೀಕೃಷ್ಣನ ರಾಜಧಾನಿಯಲ್ಲಿ ಹೋಗುವವರು ಈಗ ಪ್ರತಿಜ್ಞೆ ಮಾಡುತ್ತಾರೆ. ಇದು ರಾಜಯೋಗವಾಗಿದೆ. ನೀವು ನರನಿಂದ ನಾರಾಯಣರಾಗುತ್ತೀರಿ. ಲಕ್ಷ್ಮೀ-ನಾರಾಯಣರ ಜೀವನ ಚರಿತ್ರೆಯಿಲ್ಲ. ತಂದೆಯು ತಿಳಿಸಿದ್ದಾರೆ- ರಾಧೆ-ಕೃಷ್ಣರ ಚರಿತ್ರೆಯೇ ಲಕ್ಷ್ಮೀ-ನಾರಾಯಣರ ಜೀವನ ಚರಿತ್ರೆಯಾಗಿದೆ. ಕೃಷ್ಣನ ಜನ್ಮದಿನವನ್ನು ಆಚರಿಸುತ್ತಾರೆ. ಅಂದಾಗ ನಾರಾಯಣನ ಜಯಂತಿಯಲ್ಲಿ? ಕಾರಣವಿರಬೇಕಲ್ಲವೆ. ರಾಮನನ್ನು ಕೃಷ್ಣನಿಗಿಂತ ಮೇಲೆ ತ್ರೇತಾಯುಗದಲ್ಲಿ ತೋರಿಸಿದ್ದಾರೆ. ಶ್ರೀಕೃಷ್ಣ 16 ಕಲೆ, ರಾಮನಿಗೆ 14 ಕಲೆ. ಇಡೀ ಆಟವನ್ನೇ ಗೊಂದಲ ಮಾಡಿಬಿಟ್ಟಿದ್ದಾರೆ. ಮಹತ್ವವೆಲ್ಲವೂ ಇಲ್ಲಿಯದಾಗಿದೆ. ದೀಪಮಾಲೆಯು ಸತ್ಯಯುಗದಿಂದ ಪ್ರಾರಂಭವಾಗುವುದಿಲ್ಲ. ಸತ್ಯಯುಗದಲ್ಲಂತೂ ಪವಿತ್ರ ಪ್ರಪಂಚವಿರುತ್ತದೆ. ಎಲ್ಲರ ಆತ್ಮಗಳು ಜಾಗೃತವಾಗಿರುತ್ತದೆ. ಉತ್ಸವಗಳೆಲ್ಲವೂ ಈ ಸಮಯದ್ದಾಗಿದೆ. ಎಲ್ಲರ ಜೀವನ ಚರಿತ್ರೆಯನ್ನು ತಿಳಿದುಕೊಂಡಿದ್ದೀರಿ. ಸ್ವಯಂ ಶಿವತಂದೆಯು ಬಂದು ಮಕ್ಕಳಿಗೆ ತಿಳಿಸುತ್ತಾರೆ- ಈಗ ಪವಿತ್ರರಾಗಿ. ನೀವಾತ್ಮರು ಮೈಲಿಗೆಯಾಗಿಬಿಟ್ಟಿದ್ದೀರಿ. ಸನ್ಯಾಸಿಗಳಂತೂ ಆತ್ಮವು ನಿರ್ಲೇಪವಾಗಿದೆ ಎಂದು ಹೇಳುತ್ತಾರೆ ಆದ್ದರಿಂದ ಅನೇಕರು ಮೀನು,

ಮೊಟ್ಟೆ ಇತ್ಯಾದಿಗಳನ್ನು ತಿಂದರೂ ಪರವಾಗಿಲ್ಲ, ವಿವೇಕಾನಂದರೂ ಸಹ ಮೀನನ್ನು ತಿನ್ನುತ್ತಿದ್ದರು ಅಂದಾಗ ನಾವೂ ತಿನ್ನುತ್ತೇವೆಂದು ಹೇಳಿಬಿಡುತ್ತಾರೆ. ಎಲ್ಲರ ರೀತಿ-ಪದ್ಧತಿಗಳಿವೆಯಲ್ಲವೆ. ಮೊದಲು ಕಾಳಿದೇವಿಗೆ ಮನುಷ್ಯರ ಬಲಿ ಕೊಡುತ್ತಿದ್ದರು. ಶಿವನಿಗಂತೂ ಶ್ಯಾಮ ಎಂದು ಹೇಳುವುದಿಲ್ಲ, ಶಂಕರನಿಗೂ ಹೇಳುವುದಿಲ್ಲ. ಹಾ! ಬ್ರಹ್ಮಾ ಮತ್ತು ವಿಷ್ಣುವಿನ ಎರಡು ರೂಪಗಳು ಸುಂದರರಿಂದ ಕಪ್ಪಾಗುತ್ತಾರೆ. ಇದೆಲ್ಲವನ್ನೂ ತಂದೆಯು ತಿಳಿಸುತ್ತಾರೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ತಂದೆಯೊಂದಿಗೆ ಪೂರ್ಣ ಪ್ರೀತಿಯನ್ನಿಟ್ಟು ಸ್ವಂತಮಕ್ಕಳಾಗಬೇಕಾಗಿದೆ. ತಮ್ಮ ಪೂರ್ಣ ಸಮಾಚಾರವನ್ನು ತಂದೆಗೆ ತಿಳಿಸಬೇಕಾಗಿದೆ. ಎಂದೂ ಕುಪುತ್ರರಾಗಬಾರದು.

2. ರಕ್ಷಾಬಂಧನ ಯಥಾರ್ಥ ರಹಸ್ಯವನ್ನು ಬುದ್ಧಿಯಲ್ಲಿ ಇಟ್ಟುಕೊಂಡು ಅವಶ್ಯವಾಗಿ ಪವಿತ್ರರಾಗಬೇಕಾಗಿದೆ. ಮಾಯೆಯಿಂದ ಎಂದೂ ಸೋಲನ್ನನುಭವಿಸಬಾರದು. ಪವಿತ್ರತೆಯ ಬಲದಿಂದ ಸ್ವರಾಜ್ಯವನ್ನು ಪಡೆಯುವ ಪ್ರತಿಜ್ಞೆ ಮಾಡಬೇಕಾಗಿದೆ.

ವರದಾನ: ಸದಾ ಮಿಲನ ಉಯ್ಯಾಲೆಯಲ್ಲಿ ತೂಗುವಂತಹ ತತ್ತ್ವಂನ ಿ ತಂದೆಯ ಸಮಾನ ಭವ.

ಹೇಗೆ ಬಾಪ್ದಾದಾರವರು ತಾವು ಮಾಲೀಕರ ಆಜ್ಞೆಯನ್ನು ಒಪ್ಪಿಕೊಂಡು ಮಿಲನವನ್ನು ಆಚರಿಸುವುದಕ್ಕಾಗಿ ಬರುತ್ತಾರೆ, ಜೀ ಹಾಜಿರ್ನ ಪಾಠವನ್ನು ಓದುತ್ತಾ ಹಾಜಿರ್ ಆಗಿ ಬಿಡುತ್ತಾರೆ, ಹಾಗೆಯೇ ತತ್ತ್ವಂ. ಅಮೃತವೇಳೆಯಿಂದ ದಿನದ ಸಮಾಪ್ತಿಯವರೆಗೂ ಧರ್ಮ ಮತ್ತು ಕರ್ಮದಲ್ಲಿ ತಂದೆಯ ಸಮಾನರಾಗಿರಿ, ಆಗ ಸದಾ ಮಿಲನದ ಉಯ್ಯಾಲೆಯಲ್ಲಿ ತೂಗುತ್ತಿರುತ್ತೀರಿ. ಈ ಮಿಲನದ ಉಯ್ಯಾಲೆಯಲ್ಲಿ ಇರುವುದರಿಂದ ಪ್ರಕೃತಿ ಮತ್ತು ಮಾಯೆಯೆರಡೂ ಸಹ ತಮ್ಮ ಉಯ್ಯಾಲೆಯನ್ನು ತೂಗುವುದಕ್ಕಾಗಿ ದಾಸಿಯಾಗಿ ಬಿಡುತ್ತದೆ. ಸರ್ವ ಖಜಾನೆಗಳು ತಮ್ಮ ಈ ಶ್ರೇಷ್ಠ ಉಯ್ಯಾಲೆಯಲ್ಲಿ ಶೃಂಗಾರವಾಗಿ ಬಿಡುತ್ತದೆ.

ಸ್ಲೋಗನ್: ಸದಾ ಬ್ರಹ್ಮಾ ತಂದೆಯ ಭುಜಗಳಲ್ಲಿ ಸಮಾವೇಶವಾಗಿರುತ್ತೀರೆಂದರೆ ಸುರಕ್ಷತೆಯ ಅನುಭವವನ್ನು ಮಾಡುವಿರಿ.